**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ ಜೆ ಎಂ ರವರ ನ್ಯಾಯಾಲಯ, ಚಿಕ್ಕಮಗಳೂರು.**

**ಸಿ.ಸಿ.1418/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾ.ನಟರಾಜ್ | ಪಿ.ಡಬ್ಲ್ಯೂ. 1 |
| ತಂದೆಯ ಹೆಸರು | ಃ | ಈಶ್ವರಪ್ಪ | ಸಿ. ಡಬ್ಲ್ಯೂ.2 |
| ವಯಸ್ಸು | ಃ | 57 ವರ್ಷ | |
| ವೃತ್ತಿ | ಃ | ಸಹ ಪ್ರಾದ್ಯಾಪಕ, ಐಡಿಎಸ್.ಜಿ. ಕಾಲೇಜ್ | |
| ವಾಸ | ಃ | ಚಿಕ್ಕಮಗಳೂರು | |

**ದಿನಾಂಕಃ16-09-2022 ರಂದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ದಿಃ02-11-2019 ರಂದು ನಾನು ಕಛೇರಿಯಲ್ಲಿ ಪ್ರಾಂಶುಪಾಲನಾಗಿ ಕರ್ತವ್ಯದಲ್ಲಿದ್ದಾಗ ನಗರ ಠಾಣೆಯಿಂದ ಒಂದು ಮೆಮೋ ಬಂದಿದ್ದು, ನಮ್ಮ ಕಾಲೇಜಿನ ಹಿಂಭಾಗದಲ್ಲಿರುವ ಸ್ಟೇಡಿಯಂ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದಾರೆ, ಆದ್ದರಿಂದ ಧಾಳಿ ಮಾಡಬೇಕು ಅದಕ್ಕೆ ಸಹಕರಿಸಿ ಎಂದು ಕೇಳಿಕೊಂಡಿರುತ್ತಾರೆ. ಆ ಮೆಮೋವನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಂಜೆ 5-00 ಗಂಟೆ ಸಮಯಕ್ಕೆ ನಾನು ನಗರ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಪೋಲೀಸ್ ಅಧಿಕಾರಿಗಳು ಇದ್ದು, ಅಲ್ಲಿ ನಾನು ಪೋಲೀಸ್ ಅಧಿಕಾರಿಗಳು ಅಂಗಶೋಧನೆ ಮಾಡಿಕೊಂಡಿರುತ್ತೇವೆ ಮತ್ತು ವಾಹನವನ್ನು ಪರಿಶೀಲಿಸಿರುತ್ತೇವೆ. ಆ ಸಮಯದಲ್ಲಿ ಧಾಳಿ ಪೂರ್ವ ಮಹಜರು ಮಾಡಿರುತ್ತಾರೆ, ಆ ದಾಖಲೆಯನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈ ಮಹಜರನ್ನು 5-15 ರಿಂದ 5-45 ರವರೆಗೆ ಮಾಡಲಾಗಿರುತ್ತದೆ. ಆ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸುಮಾರು 6 ಗಂಟೆಯ ಸಮಯಕ್ಕೆ ನಮ್ಮ ಕಾಲೇಜಿನ ಹಿಂಭಾಗದ ಸ್ಟೇಡಿಯಂ ಹತ್ತಿರ ಹೋಗಿರುತ್ತೇವೆ. ಅಲ್ಲಿ ಪೋಲೀಸ್ ಜೀಪನ್ನು ಮರೆಯಲ್ಲಿ ನಿಲ್ಲಿಸಿ ನಾವು ಕಾಯುತ್ತಿದ್ದೆವು. ಆ ಸಮಯದಲ್ಲಿ ಒಂದು ಆಲ್ಟೋ ಕಾರು ಬರುತ್ತಿದ್ದು, ಪೋಲೀಸರು ಅನುಮಾನದಿಂದ ಆ ಕಾರನ್ನು ನಿಲ್ಲಿಸಿರುತ್ತಾರೆ ಮತ್ತು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾರೆ. ಆ ಕಾರಿನಲ್ಲಿದ್ದ ಚಾಲಕ ಓಡಿಹೋಗಲು ಪ್ರಯತ್ನಿಸಿದ್ದು, ಪೋಲೀಸರು ಆತನನ್ನು ಹಿಡಿದುಕೊಂಡಿರುತ್ತಾರೆ. ಚಾಲಕನಿಗೆ ಪೋಲೀಸರು ಒಂದು ಮೆಮೋವನ್ನು ಕೊಟ್ಟಿರುತ್ತಾರೆ.

ಪೋಲೀಸರು ವಿಚಾರಿಸಿದಾಗ ಕಾರಿನ ಡ್ಯಾಶ್ ಬೋರ್ಡಿನಲ್ಲಿ ಗಾಂಜಾ ಇದೆ ಎಂದು ಪ್ಲಾಸ್ಟಿಕ್ ಚೀಲ ಮತ್ತು ಅದರ ಒಳಗೆ ಇದ್ದ ಒಂದು ಚೀಲ ಇವುಗಳನ್ನು ತೆಗೆದು ಕೊಟ್ಟಿರುತ್ತಾನೆ. ಇದರ ಒಳಗೆ ಸೊಪ್ಪು, ಎಲೆ, ಕಡ್ಡಿ ಮತ್ತು ಬೀಜ ಇದ್ದವು. ಆ ವ್ಯಕ್ತಿ ತನ್ನ ಹೆಸರನ್ನು ವಸೀಂ ಎಂದದು ತಿಳಿಸಿರುತ್ತಾನೆ. ನಂತರ ಪೋಲೀಸರು ಸದರಿ ಸೊಪ್ಪು ತುಂಬಿದ ಬ್ಯಾಗನ್ನು ತೂಕ ಮಾಡಿದ್ದು ಅದು ಸುಮಾರು 200 ಗ್ರಾಂ ತೂಕ ಇತ್ತು. ಸದರಿ ಗಾಂಜಾ ಇದ್ದ ಬ್ಯಾಗನ್ನು ನನ್ನ ಮತ್ತು ಇತರ ಸಾಕ್ಷಿದಾರರ ಸಮಕ್ಷಮ ಸೀಲು ಮಾಡಿ, ಮಹಜರು ಮಾಡಿರುತ್ತಾರೆ. ಸದರಿ ಮಹಜರನ್ನು 7-00 ಗಂಟೆಯವರೆಗೆ ಮಾಡಿರುತ್ತಾರೆ. ಆ ಮಹಜರಿಗೆ ನಾನು ಸಹಿ ಮಾಡಿದ್ದು ಅದನ್ನು ನೋಡುತ್ತಿದ್ದು, ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಮಹಜರು ಸಮಯ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಆ ಛಾಯಾಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-6 ರಿಂದ 9 ಎಂದು ಗುರುತಿಸಲಾಯಿತು. ನಂತರ ಕಾರು ಮತ್ತು ಕಾರಿನ ಚಾಲಕನೊಂದಿಗೆ ಪೋಲೀಸ್ ಠಾಣೆಗೆ ಬಂದಿರುತ್ತೇವೆ. ಆ ಸಮಯ ವಶಪಡಿಸಿಕೊಂಡು ಸೀಲು ಮಾಡಿದ ಬ್ಯಾಗನ್ನು ನೋಡುತ್ತಿದ್ದು ಅದನ್ನು ಈ ದಿನ ಮುಮಾ.1 ಎಂದು ಗುರುತಿಸಲಾಯಿತು. ಆ ದಿನ ವಶಪಡಿಸಿಕೊಂಡ ಕಾರು ಇದ್ದ ಛಾಯಾಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ಆ ದಿನ ಪೋಲೀಸರು ಹಿಡಿದುಕೊಂಡ ವ್ಯಕ್ತಿಯನ್ನು ನೋಡುತ್ತಿದ್ದು, ಆತ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ.

**ಪಾಟೀ ಸವಾಲುಃ ಆರೋಪಿಗಳ ಪರಃ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಕಾರಣಗಳಿಲ್ಲದ ಕಾರಣ ಮನವಿಯನ್ನು ತಿರಸ್ಕರಿಸಲಾಯಿತು.

**ಮರು ವಿಚಾರಣೆಃ ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.